**<u>ದಿನಾಂಕ: 30-04-2020 ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಪಾಲಿಕೆ ಸದಸ್ಯರು, ವಾರ್ಡ್ ನಂ.39 ರವರ ಕಛೇರಿಯಲ್ಲಿ ಅಧ್ಯಕ್ಷರ ನೇತೃತ್ವದಲ್ಲಿ ಕರೋನಾ ವೈರಸ್ (ಕೋವಿಡ್-19) ರೋಗದ ನಿಯಂತ್ರಣದ ಬಗ್ಗೆ, ಕರ್ನಾಟಕ ಉಚ್ಚ ನ್ಯಾಯಾಲಯದ ಡಬ್ಲ್ಯೂ.ಪಿ.ನಂ.6435/2020, ದಿನಾಂಕ: 24-04-2020 ರ ಆದೇಶದಂತೆ ವಾರ್ಡ್ ಸಮಿತಿಯಲ್ಲಿ ನಡೆದ ಸಭೆಯ ನಡವಳಿಗಳು:</u>**

**<u>ಸಭೆಗೆ ಹಾಜರಿದ್ದ ಸದಸ್ಯರು:</u>**

| | | |
|---|---|---|
| 1. ಅಧ್ಯಕ್ಷರು | : | ಶ್ರೀಮತಿ. ಸರ್ವಮಂಗಳ ಸಿ.ಎಂ.ನಾಗರಾಜ್ |
| 2. ಕಾರ್ಯದರ್ಶಿ | : | ಶ್ರೀ. ಎನ್. ಕೃಷ್ಣಮೂರ್ತಿ, ಸ.ಕಂ.ಅ.(ಪೀ.ಕೈ.ಪ್ರ.) |
| 3. ಸದಸ್ಯರು | : | 1. ಶ್ರೀ. ರಾಜಣ್ಣ.ಆರ್.<br>2. ಶ್ರೀ. ರಮೇಶ್.ಹೆಚ್.ಆರ್.<br>3. ಶ್ರೀ. ಗುರುಲಿಂಗಪ್ಪ<br>4. ಶ್ರೀ. ಗಿರಿನರಸಿಂಹಯ್ಯ<br>5. ಶ್ರೀಮತಿ. ಜಯಮ್ಮ<br>6. ಶ್ರೀ. ಎಂ. ಮಂಜಪ್ಪ<br>7. ಶ್ರೀಮತಿ. ಹಾಲಮ್ಮ<br>8. ಶ್ರೀ. ಶುಭಾಶ್ ಶೆಟ್ಟಿ<br>9. ಶ್ರೀ. ಸೆಲ್ವಕುಮಾರ್<br>10. ಶ್ರೀ. ಜಾನ್‌ಸನ್ ಕೊರಿಯಾ (ಅಮರಾವತಿ ಬಡಾವಣೆ) |

**<u>ಬಿಬಿಎಂಪಿಯಿಂದ ಹಾಜರಿದ್ದ ಸಿಬ್ಬಂದಿ:</u>**

1. ಶ್ರೀ.ರಘು ರವರು, ಬಿಬಿಎಂಪಿ, ಕೇಂದ್ರ ಕಛೇರಿ, ವಿಪತ್ತು ನಿರ್ವಹಣಾ ಕೋಶ (9480685710) ತರಬೇತಿದಾರರು.
2. ಶ್ರೀ. ಕೆ.ಎಂ. ರಾಜೇಶ್ವರಿ, ಹಿ.ಆ.ಪ.
3. ಶ್ರೀ. ಕೆ. ರಾಮಕೃಷ್ಣ, ಮೌ.ಮಾ.
4. ಶ್ರೀ. ಬಿ.ಗಿರಿಯಪ್ಪ, ಕಂ.ಪ.
5. ಶ್ರೀ. ಟಿ. ಕೃಷ್ಣಮೂರ್ತಿ, ಕಂ.ವ.
6. ಶ್ರೀ. ಶಶಿಕಾಂತ್ ಬೆಳ್ಳೂರ, ಕಂ.ವ.
7. ಶ್ರೀ. ರಮೇಶ್, ಆರೋಗ್ಯ ಪರಿವೀಕ್ಷಕರು
8. ಶ್ರೀ. ಆರ್. ಪ್ರಸನ್ನ ಕುಮಾರ್, ವೆಲ್‌ಫೇರ್ ಅಧಿಕಾರಿ
9. ಶ್ರೀ. ಕೆ.ಎನ್. ರಾಜಪ್ಪ, ಡೆಪ್ಯೂಟಿ ಆರ್.ಎಫ್.ಓ.

ಸಭೆಗೆ ಹಾಜರಾದ ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳನ್ನು ಮತ್ತು ಬಿಬಿಎಂಪಿಯ ಅಧಿಕಾರಿ / ಸಿಬ್ಬಂದಿ ವರ್ಗದವರನ್ನು, ಕಾರ್ಯದರ್ಶಿರವರು ಸ್ವಾಗತಿಸಿ, ಸಭೆಯನ್ನು ಆರಂಭಿಸಿದರು. ಅಧ್ಯಕ್ಷರು ವಾರ್ಡ್ ನಂ.೩೯ರಲ್ಲಿ ಕರೋನಾ ಮಾಹಾಮಾರಿಯನ್ನು ತಡೆಯಲು ನಾವೆಲ್ಲರೂ ಒಮ್ಮತದಿಂದ ಶ್ರದ್ಧೆ ವಹಿಸಿ, ಕೊರೋನಾ ವೈರಸ್ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ಸದಸ್ಯರುಗಳಿಗೆ ಹಾಗೂ ಬಿಬಿಎಂಪಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ತಿಳಿಸಿದರು, ಈ ವಿಷಯಕ್ಕೆ ಸರ್ವಾನುಮತದಿಂದ ಸಭೆಗೆ ಬಂದಿದ್ದ ಎಲ್ಲರೂ ಒಪ್ಪಿಗೆ ಸೂಚಿಸಿದರು.

ಬಿಬಿಎಂಪಿ, ಕೇಂದ್ರ ಕಛೇರಿಯಿಂದ ನೇಮಿಸಲಾಗಿರುವ ಶ್ರೀ. ರಘು ಸರ್ ರವರು ವಾರ್ಡ್ ಮಟ್ಟದಲ್ಲಿ ಡಿ.ಎಂ.ಸಿ. (ಡಿಸಾಸ್ಟರ್ ಮ್ಯಾನೆಜ್‌ಮೆಂಟ್ ಸೆಲ್) ಗಳ ಸ್ಥಾಪನೆ ಮಾಡಿ, ತಕ್ಷಣದಿಂದ ಅನ್ವಯವಾಗುಂವಂತೆ ಆಯಾ ವಾರ್ಡ್‌ಗಳ ಪಾಲಿಕೆ ಸದಸ್ಯರುಗಳ ಅಧ್ಯಕ್ಷತೆಯಲ್ಲಿ **"ವಿಪತ್ತು ನಿರ್ವಹಣಾ ಕೋಶ''** ರಚಿಸಿ, ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು ಹಾಗೆಯೇ ಈ ವಿಪತ್ತು ನಿರ್ವಹಣಾ ಕೋಶದಲ್ಲಿ ಮುಂದುವರೆಯಲ್ಲಿದ್ದಾರೆ ಎಂದು ತಿಳಿಸಿದರು.

ಮುಂದುವರೆದು, 17 ಟೆಂಪ್ಲೆಟ್ಸ್‌ಗಳನ್ನು ವಾರ್ಡ್ ಮಟ್ಟದಲ್ಲಿ ಆರ್.ಡಬ್ಲ್ಯೂ.ಎಫ್. ಎನ್.ಜಿ.ಓ ಎಲ್ಲರನ್ನು ಹೊರತುಪಡಿಸಿ, ವಾಲಂಟಿಯರ್ ಆಗಿ ಬಂದರೆ ಅವರ ಪಟ್ಟಿ ಮಾಡುವುದು, ಡಿಸಾಸ್ಟರ್ ಕಮಿಟಿಯಲ್ಲಿ ಕೆಲಸ ಮಾಡುವವರು, ಎನ್.ಎಸ್.ಎಸ್., ಎನ್.ಸಿ.ಸಿ., ರೆಡ್‌ಕ್ರಾಸ್ ಸಂಸ್ಥೆ ಎಲ್ಲರನ್ನೂ 250 ಮೆಂಬರ್ಸ್‌ಗಳ ಒಂದು ಗ್ರೂಪ್ ಮಾಡಿ, ಎಸ್.ಎಂ.ಎಸ್. ಬಂದ ತಕ್ಷಣ ರೆಸ್ಪಾನ್ಸ್ ಮಾಡುವುದು, ಯಾವುದೇ ಕಾರಣಕ್ಕೂ ಇದರಲ್ಲಿ ರಾಜಕೀಯ ಇರಬಾರದು, ಅವಶ್ಯವಿಲ್ಲದೇ ಇರುವ ಬೇರೆ ಬೇರೆ ಮೆಸೇಜ್‌ಗಳನ್ನು ಫಾರ್ವರ್ಡ್ ಮಾಡಬಾರದು.

17 ಟೆಂಪ್ಲೇಟ್ಸ್‌ಗಳನ್ನು ವಾರ್ಡ್ ಮಟ್ಟದಲ್ಲಿ ಸ್ಥಾಪನೆ ಮಾಡುವುದು, ಕೂಲಿ ಕಾರ್ಮಿಕರ ಪಟ್ಟಿ ಮಾಡುವುದು, ಎಲಿಜಬಲ್ ಇರುವವರಿಗೆ (ವಲಸೆ ಕಾರ್ಮಿಕರು) ಆಹಾರ ಸಾಮಗ್ರಿ ನೀಡುವುದು, ಊರಿಗೆ ಹೋಗುವವರ ಪಟ್ಟಿ ಮಾಡುವುದು, ಅವರನ್ನು ಊರಿಗೆ ಕಳುಹಿಸುವ ವ್ಯವಸ್ಥೆ ಮಾಡುವುದು. ಕಮಿಟಿ ಸದಸ್ಯರು ವಾರ್ಡ್‌ನಲ್ಲಿ ಎಷ್ಟು ಜನ ಇದ್ದರೆ ಎಂದು ಗುರುತಿಸುರುವುದು, ಅಂದಾಜು 52 ಸಾವಿರ ಪಾಪುಲೇಷನ್ ಇದೆ, ಇದರಲ್ಲಿ ಎಸ್.ಡಬ್ಲ್ಯೂ.ಎಂ. ಟೀಮ್ ಮತ್ತು ಅಪಾರ್ಟ್‌ಮೆಂಟ್ ಗೈಡ್‌ಲೈನ್ಸ್ ಬೇರೆ ಇರುತ್ತದೆ.

ಲಾಕ್‌ಡೌನ್ ಇರುವವರೆಗೆ ಗ್ರೀನ್ ವಾರ್ಡ್ ಇತ್ತು, ಇನ್ನು ಮುಂದೆಯು ಸಹ ಗ್ರೀನ್ ವಾರ್ಡ್ ಇರುವ ಹಾಗೆ ನೋಡಿಕೊಳ್ಳುವುದು, ರೆಡ್ ವಾರ್ಡ್ 42 ಇದೆ, ಇಂಡಸ್ಟ್ರೀಸ್, ಅಸೋಸಿಯೇಷನ್, ಕೆ.ಪಿ.ಟಿ.ಸಿ.ಎಲ್., ಬಿಡಬ್ಲೂಎಸ್ಎಸ್‌ಬಿ ಯಾವುದೇ ಆದರೂ ಕೂಲಿ, ವಲಸೆ ಕಾರ್ಮಿಕರ ಸಮಸ್ಯೆ ಬಗೆ ಹರಿಸುವ ಬಗ್ಗೆ ನೋಟೀಸ್ ಮಾಡಿ, ಡಾಕ್ಟರ್ಸ್, ಇಂಜಿನಿಯರ್ಸ್ (ಸ್ಟ್ರಕ್ಚರಲ್), ಪೊಲೀಸ್, ಆಸ್ಪಟಲ್, ಫೈರ್ ಇಂಜಿನಿಯರ್ಸ್, ಸಂಘ-ಸಂಸ್ಥೆಗಳು ಎಲ್ಲರನ್ನೂ ಸೇರಿಸಿ ಒಂದು ಗ್ರೂಪ್ ಮಾಡಿ, ಕೊರೋನಾ ಬಗ್ಗೆ ಸಾರ್ವಜನಿಕರಲ್ಲಿ

ತಿಳುವಳಿಕೆ ಮೂಡಿಸಲು ಮಾನ್ಯ ವಿಶೇಷ ಆಯುಕ್ತರು ಹಾಗೂ ಜಂಟಿ ಆಯುಕ್ತರು ರವರ ಗಮನಕ್ಕೆ ತಂದು ಆಟೋ ಅರೇಂಜ್ ಮಾಡಿ ಪ್ರತಿದಿನ ಆಯಾ ವಾರ್ಡ್‌ನಲ್ಲಿ ಓಡಾಡುತ್ತಾ ತಿಳುವಳಿಕೆ ಮೂಡಿಸುವುದು.

ವಾರ್ಡ್ ಮಟ್ಟದಲ್ಲಿ ರ್‍ಯಾಪಿಡ್ ರೆಸ್ಪಾನ್ಸ್ ಟೀಮ್ ಮಾಡುವುದು, ಈಗಾಗಲೇ ಟೀಮ್ ಇದ್ದರೆ ಅದಕ್ಕೆ ರೆಸ್ಪಾನ್ಸ್ ಮಾಡುವುದು.

ಕೊನೆಯದಾಗಿ, ಎಲ್ಲಾ ವಾರ್ಡ್ ಕಮಿಟಿಯ ಸದಸ್ಯರುಗಳು ತಮ್ಮ ತಮ್ಮ ಪ್ರದೇಶವಾರು ಒಂದೊಂದು ಟೀಮ್ ರೆಡಿ ಮಾಡಿ, ಹೆಚ್ಚುಮಂದಿ ಕೆಲಸ ಮಾಡುವ ಸ್ಥಳಗಳಾದ, ಪಾರ್ಕ್, ಸ್ಲಂ, ಹೋಟೆಲ್ಸ್, ಬೇಕರಿ, ಮೆಡಿಕಲ್ಸ್, ಕ್ಲೀನಿಕ್ಸ್, ಶಾಲೆಗಳು, ಕಾಲೇಜ್‌ಗಳು, ಕಂಪನಿಗಳು, ಚರ್ಚ್, ಮಸೀದಿ, ದೇವಸ್ಥಾನಗಳು, ಬಿಲ್ಡಿಂಗ್ ಕಟ್ಟುತ್ತಿರುವ ಸ್ಥಳಗಳು ಮತ್ತು ಇತರೆ ಸೂಕ್ಷ್ಮ ಪ್ರದೇಶಗಳ ಪಟ್ಟಿ ಮಾಡಿ, ವಾಚ್ ಮಾಡುವುದು, ಈ ಸ್ಥಳಗಳಲ್ಲಿ ಓಡಾಡುವ, ಕೆಲಸ ಮಾಡುವವರು ಮಾಸ್ಕ್, ಸ್ಯಾನಿಟೈಸರ್ ಧರಿಸುವಂತೆ ತಿಳಿಸಿ, ಒಬ್ಬರಿಂದ ಒಬ್ಬರು 1 ಅಡಿ ದೂರವಿರುವಂತೆ ನೋಡಿಕೊಳ್ಳುವುದು, ಕೊರೋನ ಸಿಮ್‌ಟಮ್ಸ್ ಕಂಡು ಬಂದರೆ ತಕ್ಷಣವೆ ಕಾರ್ಯೋನ್ಮುಖರಾಗುವುದು ಎಂದು ತಿಳಿಸಿದರು.

ಲಾಕ್‌ಡೌನ್ ನಂತರ ತುಂಬಾ ಹುಷಾರಾಗಿ ಗಮನಿಸುವುದು, ಜ್ವರ ಕೆಮ್ಮು ನೆಗಡಿ ಇದ್ದವರನ್ನು ಒಂದು ಬುಕ್‌ಲೆಟ್ ಮಾಡುವುದು ಎಂದು ಸಭೆಗೆ ಸೂಚಿಸಿದರು.

ಈ ಮೇಲಿನ ಎಲ್ಲಾ ಅಹವಾಲುಗಳನ್ನು ಸ್ವೀಕರಿಸಿದ ಅಧ್ಯಕ್ಷರು ಅಹವಾಲುಗಳಿಗೆ ಸ್ಪಂದಿಸಿ ಈ ತಕ್ಷಣವೆ ಕಾರ್ಯೋನ್ಮುಖರಾಗಿ ಕೊರೋನ ವೈರಸ್ ಮಹಾಮಾರಿಯ ಬಗ್ಗೆ ಹಾಗೂ ಇತರೆ ವಿಷಯಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ, ಸದಸ್ಯರುಗಳ ಹಾಗೂ ಸಾರ್ವಜನಿಕರ ಜೊತೆ ಮಾಡನಾಡಿ, ಆದಷ್ಟು ಬೇಗ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಹಾಜರಿದ್ದ ವಾರ್ಡ್ ಕಮಿಟಿಯ ಎಲ್ಲಾ ಸದಸ್ಯರುಗಳು ಹಾಗೂ ಬಿಬಿಎಂಪಿಯ ಅಧಿಕಾರಿ/ಸಿಬ್ಬಂದಿರವರು ಮಾನ್ಯ ಅಧ್ಯಕ್ಷರ ಮಾತಿಗೆ ಒಮ್ಮತದಿಂದ ವಾರ್ಡ್‌ನ ಅರೋಗ್ಯಾಭಿವೃದ್ಧಿ ಕೆಲಸಕಾರ್ಯಗಳಿಗೆ ಮುನ್ನಡೆಯುವುದಾಗಿ ಭರವಸೆ ನೀಡಿದರು.

ವಾರ್ಡ್ ಕಮಿಟಿಯ ಕಾರ್ಯದರ್ಶಿರವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರಿಗೆ ಹಾಗೂ ಕಮಿಟಿಯ ಎಲ್ಲಾ ಸದಸ್ಯರುಗಳಿಗೆ ಮತ್ತು ಬಿಬಿಎಂಪಿಯ ಅಧಿಕಾರಿ/ಸಿಬ್ಬಂದಿರವರಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

4....

**<u>ಸಭೆಗೆ ಗೈರು ಹಾಜರಾದ ಸದಸ್ಯರು:</u>**

1. ಶ್ರೀ. ವೆಂಕಟೇಶ್
2. ಶ್ರೀಮತಿ. ಕೌಸಲ್ಯ
3. ಶ್ರೀ. ಗುರುಲಿಂಗಪ್ಪ
4. ಬೆಸ್ಕಾಂ ಇಲಾಖೆ
5. ಅರಣ್ಯ ಇಲಾಖೆ
6. ಎಸ್.ಡಬ್ಲ್ಯೂ.ಎಂ. ಇಲಾಖೆ
7. ಪೊಲೀಸ್ ಇಲಾಖೆ
8. ಅಧೀಕ್ಷಕರು, ತೋಟಗಾರಿಕೆ ಇಲಾಖೆ

ಅಧ್ಯಕ್ಷರು,
ವಾರ್ಡ್ ಸಮಿತಿ,
ವಾರ್ಡ್ ನಂ.೩೯-ಚೊಕ್ಕಸಂದ್ರ.
ಚೊಕ್ಕಸಂದ್ರ.

ಕಾರ್ಯದರ್ಶಿ,
ವಾರ್ಡ್ ಸಮಿತಿ,
ವಾರ್ಡ್ ನಂ.೩೯-